# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 557 |
| ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಗೌಡ ಹೆಚ್.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16.09.2021 |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೆಲವು ಕಡೆ ಇನ್ನೂ ಮರು ನವೀಕರಣಗೊಳ್ಳದ ಅಬಕಾರಿ ಲೈಸೆನ್ಸ್ ಮೂಲಕವೇ ಮದ್ಯ ವ್ಯಾಪಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವರ ವಿರುದ್ಧ ತೆಗೆದುಕೊಂಡ ಕ್ರಮವೇನು; | ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಕಳೆದ ಎರಡು ವರ್ಷಗಳಿಂದ ಅಬಕಾರಿ ಇಲಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಆದ ಲಾಭವೆಷ್ಟು; (ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಅಬಕಾರಿ ಇಲಾಖೆಯಿಂದ ಸಂಗ್ರಹಿಸಿದ ಅಬಕಾರಿ ರಾಜಸ್ವ ವಿವರಗಳು ಕೆಳಗಿನಂತಿದೆ:<br>(ರೂ. ಕೋಟಿಗಳಲ್ಲಿ)<br>ಕ್ರ. ಸಂ. / ವರ್ಷ / ಸಂಗ್ರಹಿಸಿದ ಅಬಕಾರಿ ರಾಜಸ್ವ<br>1 / 2019-20 / 21,583.95<br>2 / 2020-21 / 23,332.10 |
| ಇ) | ಅಬಕಾರಿ ಪರವಾನಗಿ ಹೊಂದಿದವರು ಅದನ್ನು ಮತ್ತೊಬ್ಬ ವ್ಯಕ್ತಿಗೆ ಲೀಸ್ ಅಥವಾ ರೆಂಟ್‌ಗೆ ನೀಡುವ ವಿಧ್ಯಮಾನಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಂಥಹ | ಅಬಕಾರಿ ಸನ್ನದುಗಳನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 17 ರನ್ವಯ ಬೇರೆಯವರಿಗೆ ಲೀಸ್ ಮಾಡಲು ಅಬಕಾರಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

| | | |
|---|---|---|
| | ವ್ಯವಸ್ಥೆಗೆ ಕಾನೂನಿನಲ್ಲಿ ಅನುಮತಿ ಇದೆಯೇ; (ಮಾಹಿತಿ ನೀಡುವುದು) | ರಾಮನಗರ ಜಿಲ್ಲೆಯಲ್ಲಿ ಒಂದು ಪ್ರಕರಣ ಹಾಗೂ ಕೋಲಾರ ಜಿಲ್ಲೆಯಲ್ಲಿ ಒಂದು ಪ್ರಕರಣ ಗಮನಕ್ಕೆ ಬಂದಿದ್ದು, ಕೆಳಕಂಡಂತೆ ಕ್ರಮ ವಹಿಸಲಾಗಿದೆ.<br>1. ರಾಮನಗರ ಜಿಲ್ಲೆಯಲ್ಲಿ ದಿನಾಂಕ: 26.07.2013 ರಂದು ಶ್ರೀಮತಿ ಟಿ. ಪದ್ಮಾ ಕೋಂ ಸಿ. ಮರಿಸ್ವಾಮಿಗೌಡ ರವರು ಅವರು ಹೊಂದಿರುವ ಮೆ॥ ಶ್ಯಾಮ್ ಸುಂದರ್ ಬಾರ್ ಅಂಡ್ ರೆಸ್ಟೋರೆಂಟ್ ಸಿಎಲ್-9 ಸನ್ನದನ್ನು ಮತ್ತು ಅದರ ಮಾಲೀಕತ್ವ ಮತ್ತು ಆಡಳಿತವನ್ನು ಕರಾರಿನ ಮೂಲಕ ಶ್ರೀ ಲಿಂಗಯ್ಯ ಬಿನ್ ದ್ಯಾವೇಗೌಡ ರವರಿಗೆ ಕಾನೂನು ಬಾಹಿರವಾಗಿ ವರ್ಗಾಯಿಸಿದ್ದು, ಇದು ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳ ನಿಯಮಗಳು) 1967ರ ನಿಯಮ 17ನ್ನು ಉಲ್ಲಂಘಿಸಿರುವುದರಿಂದ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 29ರಡಿ ಸದರಿ ಸನ್ನದನ್ನು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರು ದಿನಾಂಕ:20.07.2017ರ ಆದೇಶದಲ್ಲಿ ರದ್ದು ಪಡಿಸಿರುತ್ತಾರೆ. ಸನ್ನದುದಾರರು ಸದರಿ ಆದೇಶವನ್ನು ಪ್ರಶ್ನಿಸಿ ಅಬಕಾರಿ ಆಯುಕ್ತರ ಮೇಲ್ಮನವಿ ಪ್ರಾಧಿಕಾರದಲ್ಲಿ ಅಫೀಲು ಸಲ್ಲಿಸಿದ್ದು, ಅಬಕಾರಿ ಆಯುಕ್ತರು ಜಿಲ್ಲಾಧಿಕಾರಿಗಳ ಆದೇಶವನ್ನು ಎತ್ತಿಹಿಡಿದಿರುತ್ತಾರೆ. ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ಆದೇಶ ಹಾಗೂ ಅಬಕಾರಿ ಆಯುಕ್ತರ ಆದೇಶವನ್ನು ಪ್ರಶ್ನಿಸಿ ಸನ್ನದುದಾರರು ಘನ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಅಫೀಲು ಸಲ್ಲಿಸಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿದೆ.<br>2. ಕೋಲಾರ ನಗರದಲ್ಲಿ ಸಿಎಲ್-2 ಸನ್ನದನ್ನು ಕ್ರಮದ ಕರಾರು ಅಥವಾ ಅಗ್ರಿಮೆಂಟ್ ಮಾಡಿಕೊಂಡಿರುವುದು ವರದಿಯಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ ಇವರ ಆದೇಶ ದಿನಾಂಕ:19-01-2021 ರಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 30ರನ್ವಯ ಸದರಿ ಸನ್ನದನ್ನು ಹಿಂಪಡೆಯಲಾಗಿದೆ. |

ಆಇ 83 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು